MANGALORE MARKET REPORTS
REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | WEDNESDAY | 18-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ದರ ಮತ್ತೆ ಇಳಿಕೆ

ಪ್ರಮುಖ ಆಮದು ದೇಶಗಳಾದ ಚೀನಾ ಹಾಗೂ ಭಾರತದಿಂದ ಬೇಡಿಕೆ ಇಳಿಕೆಯಾಗುವ ನಿರೀಕ್ಷೆಯಿಂದ ನಿನ್ನೆ ಸ್ವಲ್ಪ ಮಟ್ಟದ ಹೆಚ್ಚಳ ಕಂಡಿದ್ದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಇಂದು ಇಳಿಕೆಯಾಗಿದೆ. ಪಾಮೆಣ್ಣೆ ದರ ಇಳಿಕೆ ಇತರ ಖಾದ್ಯ ತೈಲ ದರಗಳ ಮೇಲೂ ಪರಿಣಾಮ ಬೀರಬಹುದು.

## ಭಾರತದ ಸೋಯಾಮೀಲ್ ರಫ್ತು ಹೆಚ್ಚಳದ ಸಾಧ್ಯತೆ

ಅರ್ಜೆಂಟಿನಾದಲ್ಲಿ ಬರ ಪರಿಸ್ಥಿತಿಯಿಂದ ಸೋಯಾಮೀಲ್ ಉತ್ಪಾದನೆ ಕುಂಠಿತವಾಗುವ ಅಂದಾಜಿನಿಂದ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೋಯಾಮೀಲ್ ದರ ಹೆಚ್ಚಳವಾಗುತ್ತಿದೆ. ಅರ್ಜೆಂಟಿನಾ ದಿಂದ ಸೋಯಾಮೀಲ್ ಪೂರೈಕೆ ಕಡಿಮೆಯಾಗುವ ಸಾಧ್ಯತೆಯಿಂದ ಭಾರತದ ಸೋಯಾಮೀಲ್ ರಫ್ತು ಹಿಂದಿನ ವರ್ಷಕ್ಕಿಂತ ಇಮ್ಮಡಿ ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಜನವರಿ ತಿಂಗಳಲ್ಲಿ 160000 ಟನ್ ಹಾಗೂ ಫೆಬ್ರವರಿಯಲ್ಲಿ 1 ಲಕ್ಷ ಟನ್ ಸೋಯಾಮೀಲ್ ರಫ್ತು ಕರಾರಾಗಿದೆಯೆನ್ನಲಾಗಿದೆ.